ಇ) ಈ ಕಾರ್ಖಾನೆಯ ತೀವ್ರ ಅಭಿವೃದ್ಧಿ ಸಲುವಾಗಿ ಆಡಳಿತ ಮಂಡಳಿಯ ಅವಶ್ಯಕತೆ ಇರುವುದರಿಂದ, ಸರ್ಕಾರ ಆಡಳಿತ ಮಂಡಳಿಯ ಸ್ಥಾಪನೆಗಾಗಿ ಯಾವಾಗ ಚುನಾವಣೆಯನ್ನು ನಡೆಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್(ಸಹಕಾರ ಸಚಿವರು) :

ಅ) 15,778 ಮೆ.ಟನ್ ಕಬ್ಬು ನುರಿಸಿ, 1270.03 ಮೆ.ಟನ್ ಸಕ್ಕರೆ ಉತ್ಪಾದಿಸಿರುತ್ತದೆ.

ಆ) 80

ಸಕ್ಕರೆ ಇಲಾಖೆ ಮತ್ತು ಸರ್ಕಾರದಿಂದ ಹುದ್ದೆಗಳು ಮಂಜೂರಾಗಿರುವುದರ ಆಧಾರದ ಮೇಲೆ ನೇಮಕಾತಿ ಸಮಿತಿ ಮೂಲಕ ನೇಮಕಾತಿಗಳನ್ನು ಮಾಡಿಕೊಳ್ಳಲಾಗಿದೆ.

ಇ) ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಅಥಣಿ ಇದರ ಆಡಳಿತ ಮಂಡಳಿ ಚುನಾವಣೆಯನ್ನು ಮುಂದೂಡಿ ವಿಶೇಷಾಧಿಕಾರಿಗಳನ್ನು ಡಿಸೆಂಬರ್ 2000 ರವರೆಗೆ ಮುಂದುವರಿಸಬೇಕೆಂದು ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿ.ಅ.ಸಂ. 12353:2000ದಂತೆ ದಾಖಲಿಸಲ್ಪಟ್ಟು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಬಗ್ಗೆ ದಿ:4-4-2000 ದಲ್ಲಿ ತೀರ್ಪು ನೀಡಿ, ರಿಟ್ ಅರ್ಜಿದಾರರು ಚುನಾವಣೆ ಮುಂದೂಡುವ ಬಗ್ಗೆ ಸರ್ಕಾರವನ್ನು ಕೋರಲು ಸ್ವತಂತ್ರರಾಗಿರುತ್ತಾರೆಂದೂ, ರಿಟ್ ಅರ್ಜಿದಾರರ ಇಂತಹ ಮನವಿಯನ್ನು ಪರಿಶೀಲಿಸಿ ಚುನಾವಣೆ ಮುಂದೂಡುವ ಸಂಬಂಧದಲ್ಲಿ ಸೂಕ್ತ ಆದೇಶ ಹೊರಡಿಸಲು ಸರ್ಕಾರಕ್ಕೆ ಸ್ವಾತಂತ್ರ್ಯವಿರುತ್ತದೆಂದು ತಿಳಿಸಿರುತ್ತಾರೆ. ಈ ಮೇರೆಗೆ ರಿಟ್ ಅರ್ಜಿದಾರರು, ಸರ್ಕಾರಕ್ಕೆ ದಿ: 6-4-2000 ದಲ್ಲಿ ಅರ್ಜಿ ಸಲ್ಲಿಸಿ, ಕಾರ್ಖಾನೆಯ ಆಡಳಿತ ಮಂಡಳಿ ಚುನಾವಣೆಯನ್ನು ಕಾರ್ಖಾನೆಯನ್ನು ಸ್ಥಾಪಿಸಿ, ಸಕ್ಕರೆ ಉತ್ಪಾದನೆ ಆಗುವವರೆವಿಗೂ ಮುಂದೂಡಿ ವಿಶೇಷಾಧಿಕಾರಿಯವರನ್ನೇ ಕಾರ್ಖಾನೆಯ ಸ್ಥಾಪನೆಯ ಹಿತ ದೃಷ್ಟಿಯಿಂದ ಮುಂದುವರೆಸಲು ಕೋರಿರುತ್ತಾರೆ. ಸರ್ಕಾರ ಈ ಅರ್ಜಿಯನ್ನು ಪರಿಗಣಿಸಿ, ಕಾರ್ಖಾನೆಯ 15,000 ಸದಸ್ಯರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30(ಬಿ)ರ ಅಡಿ ಅಧಿಕಾರ ಚಲಾಯಿಸಿ ಆದೇಶ ಕ್ರ.ಸಮಾತೂ:303: ಸಸಕಾ:99, ದಿನಾಂಕ 11-4-2000 ದಂದು ದಿ.ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಇದರ ಆಡಳಿತ ಮಂಡಳಿ ಚುನಾವಣೆಯನ್ನು ಮುಂದಿನ ಆದೇಶದವರೆಗೆ ಮುಂದೂಡಿರುತ್ತದೆ ಮತ್ತು ಸದರಿ ಕಾರ್ಖಾನೆಗೆ ನೇಮಿಸಲಾಗಿರುವ ವಿಶೇಷಾಧಿಕಾರಿಗಳನ್ನು ಮುಂದಿನ ಆದೇಶದವರೆಗೆ ಮುಂದುವರೆಸಿರುತ್ತದೆ.

ಕಾರ್ಖಾನೆಯು 2001-02ರಲ್ಲಿ ಪ್ರಾಯೋಗಿಕ ಕಬ್ಬು ನುರಿಸುವಿಕೆ ಪ್ರಾರಂಭಿಸಿದ್ದು, ಪೂರ್ಣ ಪ್ರಮಾಣದ ಕಬ್ಬು ನುರಿಸುವಿಕೆಯನ್ನು ಪ್ರಾರಂಭಿಸಬೇಕಾಗಿದೆ. ಕಾರ್ಖಾನೆ ಪೂರ್ಣ ಪ್ರಮಾಣದ ಕಬ್ಬು ನುರಿಸುವಿಕೆ ಪ್ರಾರಂಭಿಸಿದ ಮೇಲೆ ಈ ಕುರಿತ ವಿಶೇಷಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದ ನಂತರ ಪರಿಶೀಲಿಸಿ ಕಾರ್ಖಾನೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ತಂಬಾಕು ಬೆಳೆಗಾರರ ಸಮಸ್ಯೆ

683(1183) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿನ ತಂಬಾಕು ಬೆಳೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅದರಲ್ಲಿ ಮುಖ್ಯವಾಗಿರುವ ತಂಬಾಕು ಬೆಂಬಲ ಬೆಲೆ, ಕಾರ್ಡುದಾರರಿಗೆ ಲೈಸೆನ್ಸ್ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಆ) ರಾಜ್ಯದಲ್ಲಿರುವ ಅಧಿಕೃತ ತಂಬಾಕು ಬೆಳೆಗಾರರ ಹಾಗೂ ಅನಧಿಕೃತ ತಂಬಾಕು ಬೆಳೆಗಾರರ ಸಂಖ್ಯೆ ಎಷ್ಟು?

ಇ) ಅನಧಿಕೃತ ತಂಬಾಕು ಬೆಳೆಗಾರರನ್ನು ಅಧಿಕೃತ ತಂಬಾಕು ಬೆಳೆಗಾರರಾಗಿ ಪರಿಗಣಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.

ಈ) 2002-03ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರೈತರಿಗೆ ತಂಬಾಕು ಬೆಳೆ ಬೆಳೆಯುವ ಬಗ್ಗೆ ನಿಗದಿ ಪಡಿಸಿರುವ ಪ್ರಮಾಣ ಎಷ್ಟು?

ಉ) ತಂಬಾಕು ಬೆಳೆಗೆ ಬೆಂಬಲ ಬೆಲೆ ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಬೆಳೆಯುತ್ತಿರುವ ತಂಬಾಕಿಗೆ ಬೆಂಬಲ ಬೆಲೆಯನ್ನು ತಂಬಾಕು ಮಂಡಳಿಯು ಪ್ರಸ್ತುತ ನಿಗಧಿಪಡಿಸುತ್ತಿದೆ. ಆದರೆ ಬಹುತೇಕ ಸಮಯದಲ್ಲಿ ಬೆಂಬಲಕ್ಕಿಂತ ಹೆಚ್ಚು ಬೆಲೆ ಬೆಳೆಗಾರನಿಗೆ ದೊರಕುತ್ತಿದೆ. ಲೈಸೆನ್ಸ್ ಜೊತೆಗೆ ಕಾರ್ಡ್‌ನ್ನು ಸಹ ಹೊಂದಿ ತಂಬಾಕು ಬೆಳೆದಿರುವ ತಂಬಾಕು ಬೆಳೆಗಾರರಿಗೆ ಈ ಸಾಲಿನಲ್ಲಿಯೂ ಸಹ ತಂಬಾಕು ಮಾರಾಟ ಮಾಡಲು ಅವಕಾಶ ಕಲ್ಪಿಸಿ ಕೊಡುವ ಬಗ್ಗೆ ದಿನಾಂಕ: 8-2-2002 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದ್ದು ಈ ಪ್ರಕಾರ 2001-02ನೇ ಸಾಲಿನಲ್ಲಿ ಲೈಸೆನ್ಸ್ ಹೊಂದದೆ ಕಾರ್ಡು ಆಧಾರದ ಮೇಲೆ ತಂಬಾಕು ಬೆಳೆದಿರುವ ಬೆಳೆಗಾರರಿಗೆ ತಂಬಾಕನ್ನು ಮಾರಾಟ ಮಾಡಲು ಅನುಮತಿ ನೀಡಲಾಗಿದೆ. ಆ ಪ್ರಕಾರ ಕಾರ್ಡು ಹೊಂದಿರುವ ಬೆಳೆಗಾರರಿಗೆ ಲೈಸೆನ್ಸ್ ನೀಡುವುದು ಎಲ್ಲಾ ಅನಧಿಕೃತ ಬೆಳೆಗಾರರು ಹಾಗೂ ಬ್ಯಾರೆನ್ನುಗಳನ್ನು ಅಧಿಕೃತಗೊಳಿಸುವ ಬಗ್ಗೆ ತಂಬಾಕು ಮಂಡಳಿಯನ್ನು ಒತ್ತಾಯಿಸಲಾಗುತ್ತಿದೆ.

ಆ) ಕರ್ನಾಟಕ ರಾಜ್ಯದಲ್ಲಿ 2001-02ನೇ ಸಾಲಿನಲ್ಲಿ ಅಂತ್ಯಕ್ಕೆ ಕೊನೆಗೊಂಡಂತೆ 18,594 ಅಧಿಕೃತ ಬೆಳೆಗಾರರು ಹಾಗೂ 12,730 ಅನಧಿಕೃತ ಬೆಳೆಗಾರರು ಇರುತ್ತಾರೆ.

ಇ) ಅನಧಿಕೃತ ತಂಬಾಕು ಬೆಳೆಗಾರರನ್ನು ಅಧಿಕೃತ ತಂಬಾಕು ಬೆಳೆಗಾರರನ್ನಾಗಿ ಪರಿಗಣಿಸಲು ದಿನಾಂಕ: 8-2-2002 ರಂದು ಮಾನ್ಯ ಕೃಷಿ ಸಚಿವರು, ತಂಬಾಕು ಮಂಡಳಿಯ ಅಧಿಕಾರಿಗಳು ಹಾಗೂ ತಂಬಾಕು ಬೆಳೆಯುವ ಜನಪ್ರತಿನಿಧಿಗಳೊಡನೆ ಸಭೆ ನಡೆಸಿ, ಸಕ್ರಮಗೊಳಿಸುವಂತೆ ಒತ್ತಾಯಪಡಿಸಿರುತ್ತಾರೆ. ಅಲ್ಲದೆ, ದಿನಾಂಕ: 13-7-2002ರಂದು ಬೆಂಗಳೂರಿನಲ್ಲಿ ಪಾರ್ಲಿಮೆಂಟರಿ ಉಪ ಸಮಿತಿ ಸಭೆಗೆ ಮನವಿ ಸಲ್ಲಿಸಿ ಒತ್ತಾಯ ಮಾಡಲಾಗಿದೆ. ಇಷ್ಟಲ್ಲದೆ, ತಂಬಾಕು ಮಂಡಳಿಯಲ್ಲಿ ನಡೆದ ದಿನಾಂಕ: 21-5-2002 ರಂದು ಗುಂಟೂರಿನ ಸಭೆಯಲ್ಲಿ ಸಹ ಒತ್ತಾಯ ಮಾಡಲಾಗಿದೆ.

ಈ) 2002-03ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ತಂಬಾಕು ಬೆಳೆಗಾರರಿಗೆ 41.70 ದಶಲಕ್ಷ ಕೆ.ಜಿ.ಗಳ ಉತ್ಪಾದನಾ ಗುರಿಯನ್ನು ತಂಬಾಕು ಮಂಡಳಿ ನಿಗಧಿಪಡಿಸಿದೆ.

ಉ) ಪ್ರಸಕ್ತ ತಂಬಾಕಿಗೆ ನಿಗದಿಪಡಿಸುತ್ತಿರುವ ಬೆಂಬಲ ಬೆಲೆಯನ್ನು ಹೆಚ್ಚಿಸುವ ಬಗ್ಗೆ ತಂಬಾಕು ಮಂಡಳಿಯ ಎಲ್ಲಾ ಸಭೆಗಳಲ್ಲಿಯೂ ರಾಜ್ಯ ಮಾನ್ಯ ಕೃಷಿ ಸಚಿವರು ನಡೆಸಿದ ದಿನಾಂಕ 8-2-2002ರ ಸಭೆಯಲ್ಲಿ ದಿನಾಂಕ:21-5-2002 ರಂದು ನಡೆದ ತಂಬಾಕು ಮಂಡಳಿಯ ಸಭೆಯಲ್ಲಿ ಹಾಗೂ ದಿನಾಂಕ: 13-7-2002 ರಂದು ಬೆಂಗಳೂರಿನಲ್ಲಿ ನಡೆದ ಪಾರ್ಲಿಮೆಂಟರಿ ಉಪ ಸಮಿತಿ ಸಭೆಯಲ್ಲೂ ಸಹ ಒತ್ತಾಯ ಪಡಿಸಲಾಗಿದೆ.

ಅಡಮಾನ ಸಾಲ ಯೋಜನೆ

686(876) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸರಕಾರ ರೈತರ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ದೊರೆಯದಿದ್ದರೆ"ಅಡಮಾನ ಸಾಲ ಯೋಜನೆಯ" ಲಾಭ ಪಡೆದಿರುವ ಮಾರುಕಟ್ಟೆಗಳು ವಿವರ ಯಾವ ಉತ್ಪನ್ನಗಳಿಗೆ ಎಷ್ಟು ಪ್ರಮಾಣ ಹಣ ಸಹಾಯ ಮತ್ತು ವೇರ್‌ಹೌಸ್(ದಾಸ್ತಾನು ಉಗ್ರಾಣದ) ಅವಕಾಶ ವಗೈರೆ ವ್ಯವಸ್ಥೆಯನ್ನು ಸರ್ಕಾರ ಮಾಡಿರುವುದೆ?

ಆ) ಹುಬ್ಬಳ್ಳಿ ಧಾರವಾಡ ಮಾರುಕಟ್ಟೆಗಳಿಗೆ ಬರುವ ರೈತರ ಉತನ್ನ (ಹುಟ್ಟುವಳಿ)ಗಳು ಯಾವುವು; ಅದರಲ್ಲಿ ಯಾವ ಹುಟ್ಟುವಳಿಗಾಗಿ ಅಡಮಾನ ಸಾಲ ನೀಡಿದ್ದೀರಿ; ಪ್ರತಿ ಉತ್ಪನ್ನಗಳ ಪ್ರಮಾಣ ಸಾಲದ ಹಣ ಮತ್ತು ಉಗ್ರಾಣದಲ್ಲಿ ಸರ್ಕಾರ ಅವಕಾಶ ಮಾಡಿರುವುದು;

ಇ) ಧಾರವಾಡದಲ್ಲಿ ಮತ್ತು ಹುಬ್ಬಳ್ಳಿಯ ಮಾರುಕಟ್ಟೆಗಳಲ್ಲಿ ಎಷ್ಟು ಪ್ರಮಾಣದ ಉತ್ಪನ್ನಗಳನ್ನು ಸಂರಕ್ಷಿಸಲು ಉಗ್ರಾಣಗಳ ವ್ಯವಸ್ಥೆ ರೈತರಿಗಾಗಿ ಕಾಯ್ದಿರಿಸಿದೆ; ಎರಡೂ ಮಾರುಕಟ್ಟೆ ವಿವರ ತಿಳಿಸುವಿರಾ?

ಶ್ರೀ ಬಿ.ಎಸ್. ಪಾಟೀಲ್(ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ದಿನಾಂಕ: 27-1-94 ರಿಂದ ಸಣ್ಣ ಮತ್ತು ಅತೀ ಸಣ್ಣ ರೈತರ ಹುಟ್ಟುವಳಿಗಳನ್ನು ಸಮಿತಿಯ ಗೋದಾಮುಗಳಲ್ಲಿ ಹಾಗೂ ಕೇಂದ್ರ ಮತ್ತು ರಾಜ್ಯ ಉಗ್ರಾಣ ನಿಗಮಗಳಲ್ಲಿ ದಾಸ್ತಾನಿಟ್ಟು ನೀಡುವ ರಸೀದಿಯ ಆಧಾರದ ಮೇಲೆ ಅಲ್ಪಾವಧಿ ಮುಂಗಡ ನೀಡಲು ನಿಯಮಗಳನ್ನು ರಚಿಸಲಾಗಿದೆ. ಈ ನಿಯಮದಡಿ ಅಲ್ಪಾವಧಿ ಮುಂಗಡ ನೀಡಿರುವ ಸಮಿತಿಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.

ಆ) ವಿವರ ಅನುಬಂಧ-2 ಮತ್ತು 3 ರಲ್ಲಿ ನೀಡಿದೆ.

ಇ) ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 10,000 ಮೆ.ಟನ್ ಸಾಮರ್ಥ್ಯದ ಎರಡು ಗೋದಾಮುಗಳು ಹಾಗೂ ಧಾರವಾಡದಲ್ಲಿ ಸದರಿ ಉಗ್ರಾಣ ನಿಗಮದ 5 ಉಗ್ರಾಣಗಳಿದ್ದು ಸಂಗ್ರಹಣಾ ಸಾಮರ್ಥ್ಯ 1492 ಮೆ.ಟನ್ ಆಗಿರುತ್ತದೆ. ಇಲ್ಲಿ ಉತ್ಪನ್ನಗಳನ್ನು ಸಂರಕ್ಷಿಸಲು ವ್ಯವಸ್ಥೆ ಮಾಡಲಾಗಿದೆ.